ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈಶಾ-04/ಯುಸಂಸ್ಪ/2016-17

ನಿರ್ದೇಶಕರ ಕಛೇರಿ.
ಪದವಿ ಪೂರ್ವ ಶಿಕ್ಷಣ ಇಲಾಖೆ
ಸಂಪಿಗೆ ರಸ್ತೆ, 18ನೇ ಕ್ರಾಸ್
ಮಲ್ಲೇಶ್ವರಂ. ಬೆಂಗಳೂರು-12
ದಿನಾಂಕ: 21-12-2016.

## ಸುತ್ತೋಲೆ

ವಿಷಯ: 2016-17ನೇ ಶೈಕ್ಷಣಿಕ ಸಾಲಿನ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆಯನ್ನು ದಿನಾಂಕ 13/01/2017ರಂದು ಆಯೋಜಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಪತ್ರ ಸಮ ಸಂಖ್ಯೆ:ಪಪೂಶಿ/ಶೈಶಾ-04/ಯುಸಂಸ್ಪ/2016-17 ದಿನಾಂಕ 05/12/2016.

2)ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಂವ್ಯಶಾ 07 ಯುಸಂಸ್ಪ 2016 ದಿನಾಂಕ 20/12/2016.

*****

ದಿನಾಂಕ 13/01/2017ರಂದು ಪದವಿ ಪೂರ್ವ ಶಿಕ್ಷಣ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆಯನ್ನು ಬೆಂಗಳೂರಿನ ಕೆಜಿಎಸ್ ಸಭಾಂಗಣ, ಕಬ್ಬನ್ ಪಾರ್ಕ್‌ದಲ್ಲಿ ಉಲ್ಲೇಖ-1 ರ ಸೂಚನೆಯಂತೆ ಆಯೋಜಿಸಲಾಗಿದೆ. ಪ್ರಯುಕ್ತ, ಪ್ರತಿ ಜಿಲ್ಲೆಯಲ್ಲಿ ವಿಜೇತರಾದ 02 ವಿದ್ಯಾರ್ಥಿಗಳು ಹಾಗೂ ಒಬ್ಬ ಉಸ್ತುವಾರಿ ಉಪನ್ಯಾಸಕರನ್ನು ಕಾರ್ಯಕ್ರಮದ ದಿನದಂದು ಭಾಗವಹಿಸಲು ಅನುಕೂಲವಾಗುವಂತೆ ನಿಯೋಜಿಸಲು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಸೂಚಿಸಲಾಗಿದೆ. ಕಾರ್ಯಕ್ರಮದ ದಿನಾಂಕ 13/01/2017ರಂದು ಪೂರ್ವಾಹ್ನ 9-00 ಗಂಟೆಗೆ ಪ್ರಾರಂಭವಾಗುವುದರಿಂದ ಹಿಂದಿನ ದಿವಸ ಸಂಜೆ 6-00 ಗಂಟೆಯಿಂದ ದಿನಾಂಕ 13/01/2017ರಂದು ಸಂಜೆ 6-00 ಗಂಟೆವರೆಗೆ ಎನ್‌ಜಿಓ ಭವನದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳೊಂದಿಗೆ ಆಗಮಿಸುವ ಉಸ್ತುವಾರಿ ಉಪನ್ಯಾಸಕರು ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸುರಕ್ಷತೆಯ ಸಂಪೂರ್ಣ ಜವಾಬ್ದಾರಿಯನ್ನು ವಹಿಸುವುದು. ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸುರಕ್ಷತೆಗೆ ಧಕ್ಕೆಯಾದಲ್ಲಿ ಸಂಬಂಧಿಸಿದ ಉಪನ್ಯಾಸಕರನ್ನು ಹೊಣೆ ಮಾಡಲಾಗುವುದು.

ಈ ಸಾಲಿನ ರಾಜ್ಯಮಟ್ಟದ ಯುವಸಂಸತ್ ಸ್ಪರ್ಧೆ ನಡೆಸಲು ಬೆಂಗಳೂರು ದಕ್ಷಿಣ ಜಿಲ್ಲೆಯ ಉಪ ನಿರ್ದೇಶಕರಿಗೆ ವಹಿಸಲಾಗಿದೆ. ಕಾರ್ಯ ಕ್ರಮದ ನೋಡಲ್ ಅಧಿಕಾರಿಯಾಗಿ ಸಹಾಯಕ ನಿರ್ದೇಶಕರು, ಶ್ರೀಮತಿ ಉಷಾದೇವಿ ವಿ. ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ ಇವರನ್ನು ನೇಮಿಸಲಾಗಿದೆ.(ಮೊಬೈಲ್ ಸಂಖ್ಯೆ 9449350935: southddoffice@gmail.com)

ಉಲ್ಲೇಖ-01ರ ಈ ಕಛೇರಿಯ ಸುತ್ತೋಲೆಯಲ್ಲಿ ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ದಿನಾಂಕ 20/12/2016ರೊಳಗಾಗಿ ನಡೆಸಲು ಸೂಚಿಸಲಾಗಿತ್ತು. ಆದಾಗ್ಯೂ ಕೆಲವು ಜಿಲ್ಲೆಗಳಲ್ಲಿ ಇದುವರೆವಿಗೂ ಕಾರ್ಯಕ್ರಮವನ್ನು ನಡೆಸದಿರುವುದನ್ನು ಗಮನಿಸಲಾಗಿದೆ. ಇನ್ನು ಕೆಲವು ಜಿಲ್ಲೆಗಳು ಸೂಚನೆಯಂತೆ ಕಾನೂನು ಮತ್ತು ಸಂಸದೀಯ ಇಲಾಖೆಯ ಸಹಭಾಗಿತ್ವ ಇಲ್ಲದೆ ನಡೆಸಿರುವುದನ್ನು ಸಂಸದೀಯ ವ್ಯವಹಾರಗಳ

ಇಲಾಖೆಯವರು ಆಕ್ಷೇಪಿಸಿರುತ್ತಾರೆ. ಈ ಸಂಬಂಧವಾಗಿ ಸದರಿ ಇಲಾಖೆಯನ್ನು ಸಂಪರ್ಕಿಸಿ ಸೂಕ್ತ ಮಾರ್ಗದರ್ಶನ ಪಡೆಯುವುದು.

ಕಾರ್ಯಕ್ರಮ ನಡೆಸದಿರುವ ಎಲ್ಲಾ ಜಿಲ್ಲೆಗಳು ಕಡ್ಡಾಯವಾಗಿ ಈ ತಿಂಗಳ ಅಂತ್ಯದೊಳಗೆ ಕಾರ್ಯಕ್ರಮವನ್ನು ತಪ್ಪದೇ ಸೂಚಿಸಿದಂತೆ ನಡೆಸುವುದು.

ಎಲ್ಲಾ ಜಿಲ್ಲೆಗಳು ಕಾರ್ಯಕ್ರಮ ನಡೆಸಿದ ಕುರಿತ ವರದಿಯನ್ನು ದಿನಾಂಕ 31/12/2016ರೊಳಗೆ ಈ ಕಛೇರಿಯ ಇ-ಮೇಲ್ academic.pue@gmail.com ಗೆ ಹಾಗೂ ಒಂದು ಪ್ರತಿಯನ್ನು ಸಂಸದೀಯ ವ್ಯವಹಾರಗಳ ಇಲಾಖೆಯವರ ಇ-ಮೇಲ್ Secy-dpal@karnataka.gov.in ವಿಳಾಸಕ್ಕೆ ಕಳುಹಿಸುವುದು.

ಕಾರ್ಯಕ್ರಮವನ್ನು ಸೂಚನೆಯಂತೆ ನಡೆಸದ ಹಾಗೂ ದಾಖಲೀಕರಣ ವರದಿಯನ್ನು ಸಲ್ಲಿಸದ ಜಿಲ್ಲೆಗಳ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

ನಿರ್ದೇಶಕರು 14/11
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ ಮುಂದಿನ ಕ್ರಮಕ್ಕಾಗಿ.
2. ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ, ಕೊಠಡಿ ಸಂಖ್ಯೆ 136, ವಿಧಾನ ಸೌಧ, ಬೆಂಗಳೂರು-560001.
3. ಶಾಖಾಧಿಕಾರಿಗಳು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ವೆಬ್ ಸೈಟ್‌ಗೆ ಅಳವಡಿಸಲು. ಹಾಗೂ DDಗಳಿಗೆ ಇ-ಮೇಲ್ ಕಳುಹಿಸಲು
4. ಕಛೇರಿ ಪ್ರತಿ.